ಚಿಕ್ಕಬಳ್ಳಾಪುರ ನಗರದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ನಿವೇಶನ ಹಂಚಿಕೆ

20(162): ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಬಳ್ಳಾಪುರ ನಗರದಲ್ಲಿ ಕರ್ನಾಟಕ ಗೃಹ ಮಂಡಳಿಯವರು ನಿವೇಶನವನ್ನು ನಿಡುತ್ತೇವೆಂದು ಅರ್ಜಿದಾರರಿಂದ ನೋಂದಣಿ ಶುಲ್ಕ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅರ್ಜಿದಾರರಿಂದ ಪಡೆದಿರುವ ನೋಂದಣಿ ಶುಲ್ಕ ಮೊತ್ತವೆಷ್ಟು? ಮತ್ತು ನೋಂದಣಿ ಶುಲ್ಕ ಪಡೆದು ಎಷ್ಟು ವರ್ಷಗಳಾಗಿವೆ? (ವಿವರಗಳನ್ನು ನೀಡುವುದು);

ಇ) ನಿವೇಶನಕ್ಕಾಗಿ ನೋಂದಣಿ ಶುಲ್ಕ ಪಾವತಿಸಿರುವ ಅರ್ಜಿದಾರರ ಸಂಖ್ಯೆ ಎಷ್ಟು? (ವಿವರಗಳನ್ನು ನೀಡುವುದು);

ಈ) ನೋಂದಣಿ ಶುಲ್ಕ ಪಡೆದ ಅರ್ಜಿದಾರರಿಗೆ ಇದುವರೆವಿಗೂ ನಿವೇಶನಗಳನ್ನು ಹಂಚಿಕೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಅರ್ಜಿದಾರರಿಗೆ ಯಾವಾಗ ನಿವೇಶನಗಳನ್ನು ನೀಡಲಾಗುವುದು ಮತ್ತು ನಗರದ ಯಾವ ಭಾಗದಲ್ಲಿ ನೀಡಲಾಗುವುದು? (ವಿವರಗಳನ್ನು ನೀಡುವುದು):

ಶ್ರೀ ವಿ. ಸೋಮಣ್ಣ (ವಸತಿ ಸಚಿವರು)

ಅ) ಬಂದಿದೆ.

ಆ) ಒಟ್ಟು ರೂ. 15,81,875 ಗಳನ್ನು ನೋಂದಣಿ ಶುಲ್ಕವಾಗಿ 2006-07ರಲ್ಲಿ ಪಡೆಯಲಾಗಿದೆ. ನೋಂದಣಿ ಶುಲ್ಕ ಪಡೆದು ಐದು ವರ್ಷಗಳಾಗಿದೆ.

ಇ) ನಿವೇಶನಕ್ಕಾಗಿ ನೋಂದಣಿ ಶುಲ್ಕ ಪಾವತಿಸಿರುವ ಒಟ್ಟು ಅರ್ಜಿದಾರರ ಸಂಖ್ಯೆ 891.

ಈ) & ಉ) ನೋಂದಣಿ ಶುಲ್ಕ ಪಾವತಿಸಿದ ಅರ್ಜಿದಾರರಿಗೆ ಇದುವರೆವಿಗೂ ನಿವೇಶನಗಳನ್ನು ನೀಡಿರುವುದಿಲ್ಲ. ಹೊಸ ವಸತಿ ಯೋಜನೆಯಾದ 225 ವಸತಿ ಯೋಜನೆಯಡಿಯಲ್ಲಿ ಕ್ರಮ ವಹಿಸಲಾಗುತ್ತಿದ್ದು, ಚಿಕ್ಕಬಳ್ಳಾಪುರ ನಗರಕ್ಕೆ ಹೊಂದಿಕೊಂಡಂತೆ ಜಮೀನು

ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದ್ದು ಜಮೀನು ಪಡೆದ ನಂತರ ಬಡಾವಣೆ ಅಭಿವೃದ್ಧಿ ಪಡಿಸಿ ನಿವೇಶನಗಳ ಹಂಚಿಕೆಗೆ ಕ್ರಮ ವಹಿಸಲಾಗುವುದು.

ಕೊಳಚೆ ನಿರ್ಮೂಲನ ಮಂಡಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ

21(59): ಶ್ರೀ ಶಿವಕುಮಾರ್ ಡಿ.ಕೆ. (ಕನಕಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದಿಂದ ಕಳೆದ 3 ವರ್ಷಗಳಿಂದ ರಾಜ್ಯ ಸರ್ಕಾರದ ಕೊಳಚೆ ನಿರ್ಮೂಲನಾ ಮಂಡಳಿಗೆ ವಿವಿಧ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು, ವಿವರ ನೀಡುವುದು (ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಅನುದಾನದಲ್ಲಿ ಜಿಲ್ಲಾ ಹಾಗೂ ತಾಲ್ಲೂಕುವಾರು ಖರ್ಚಾಗಿರುವ ಹಣವೆಷ್ಟು? (ವಿವರ ಒದಗಿಸುವುದು);

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಕೇಂದ್ರ ಸರ್ಕಾರದಿಂದ ಕಳೆದ 3 ವರ್ಷಗಳಿಂದ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ

ರೂ. ಕೋಟಿಗಳಲ್ಲಿ

ಯೋಜನಾವಾರು	GOI	GOK	ಒಟ್ಟು
ನರ್ಮ್ ಬೆಂಗಳೂರು	88.83	99.97	188.80
ನರ್ಮ್ ಮೈಸೂರು	57.96	11.12	69.08
ಐಹೆಚ್ಎಸ್‌ಡಿಪಿ	131.36	62.12	203.32
ಒಟ್ಟು	**278.15**	**173.21**	**461.20**

ಜಿಲ್ಲಾವಾರು ತಾಲ್ಲೂಕುವಾರು ಅನುದಾನ ಮಂಡಳಿಗೆ ಬಿಡುಗಡೆಯಾಗಿರುವುದಿಲ್ಲ.

ಆ) ಈ ಮೇಲ್ಕಂಡ ಮೊತ್ತದಲ್ಲಿ ಖರ್ಚು ಮಾಡಲಾದ ವಿವರಗಳು ಈ ಕೆಳಕಂಡಂತಿವೆ.